ಗುರುತಿತ್ತು. ಇವು ಮಹಾವೀರರ ಪಾದಗಳ ಗುರುತು ಎಂಬುದು ನಂಬಿಕೆ. '1008 ಶ್ರೀ ಮಹಾವೀರ ತೀರ್ಥಂಕರರು' ಎಂದು ಗೋಡೆಯ ಮೇಲೆ ಬರೆದಿತ್ತು. ಅಂದಹಾಗೆ, ಈ ಬಸದಿ ಬೆಟ್ಟದ ಹೆಸರು ಮಂದರಗಿರಿ. ವಿಶಾಲವಾದ ಏಕಶಿಲಾ ಬಂಡೆಯ ಮೇಲೆ ಬಹಳ ಹಿಂದೆ ಬರೆದ ಬೆಟ್ಟದ ಹೆಸರು ಕಾಣಿಸಲಾರದಷ್ಟು ಮಾಸಿಹೋಗಿದೆ.

## 12ನೇ ಶತಮಾನದ ಶಾಸನ

ಬಸದಿಗಳ ಆವರಣದಲ್ಲಿ ಒಂದು ಶಾಸನ ಕಣ್ಣಿಗೆ ಬಿತ್ತು. ಅದರ ಬಳಿಯೇ ತೀರ್ಥಂಕರರೊಬ್ಬರ ಮುಕ್ಕಾದ ಮೂರ್ತಿಯ ಮೇಲ್ಭಾಗ ಕಾಣಿಸಿತು. 'ಎಪಿಗ್ರಾಫಿಕ ಕರ್ನಾಟಿಕಾ'ದ 12ನೇ ಸಂಪುಟವನ್ನು ಪರಾಮರ್ಶಿಸಿ ಈ ಶಾಸನವನ್ನು ಅರ್ಥ ಮಾಡಿಕೊಂಡೆ. ಅದರಲ್ಲಿ, ಇಂದಿನ ಪಂಡಿತನಹಳ್ಳಿ, ತುಮಕೂರು ಜಿಲ್ಲೆಯ ಪಂಡಿತರಹಳ್ಳಿ ಎಂದು ನಮೂದಿಸಿತ್ತು.

ಶಾಸನವನ್ನು ಮತ್ತು ಅದರ ಅರ್ಥ ವಿವರಗಳನ್ನು ಓದುತ್ತಿದ್ದಂತೆ, ನಾನು ರಾಜ ವೀರ ಗಂಗ ಹೊಯ್ಸಳ ನರಸಿಂಹ ದೇವನ ಆಳ್ವಿಕೆಯ 12ನೇ ಶತಮಾನಕ್ಕೆ ಜಾರಿದ್ದೆ. ಆತನಿಗೆ ಎರೆಯಂಗ ಎಂಬ ಸರ್ವಾಧಿಕಾರಿ ಸೇನಾಪತಿ ದಂಡನಾಯಕನಿದ್ದ. ತನ್ನ ಧೈರ್ಯ ಸಾಹಸಗಳಿಗೆ ಹೆಸರಾದ ಈಶ್ವರ–ಚಾಮುಪತಿ ಎಂಬಾತ ತನ್ನನ್ನು 'ಎರೆಯಂಗಮಯ್ಯನ ಪಾದಪದ್ಮೋಪಜೀವಿ' ಎಂದು ಕರೆದುಕೊಂಡಿದ್ದಾನೆ. ಈಶ್ವರನ ಹೆಂಡತಿ ಮಾಚಿಯಕ್ಕ, ಚಂದವೆ ಮತ್ತು ಬಿಟ್ಟಿಗಾಂಕ ಅವರ ಪುತ್ರಿ. ಆಕೆಯ ಗುರು ಗಾಂಡವಿಮುಕ್ತ ದೇವ ಮುನಿಪ. ದೈವಭಕ್ತಳಾದ ಮಾಚಿಯಕ್ಕ ಶ್ರೀ ಮಯ್ದುವೊಳಲ ದಿವ್ಯ ತೀರ್ಥದೊಳ್ ಜಿನ ಮಂದಿರವನ್ನು ಕಟ್ಟಿಸಿದ ಉಲ್ಲೇಖ ಇಲ್ಲಿಯ ಶಾಸನದಲ್ಲಿದೆ. ಮಾಚಿಯಕ್ಕ ಬಸದಿಯ ಉಪಯೋಗಕ್ಕೆ ಪದ್ಮಾವತಿ ಕೆರೆ ಕಟ್ಟಿಸಿದಳು ಎಂದೂ ಶಾಸನ ತಿಳಿಸುತ್ತದೆ. 'ಪದ್ಮಾವತಿಗೆರೆಯೆಂಬ ಕೆರೆಯ ಕಟ್ಟಿಸಿಕೊಟ್ಟಳ್" ಎಂಬುದು ಶಾಸನದಲ್ಲಿ ಬರೆದಿರುವ ಪದಗಳು. ಈ ಪದ್ಮಾವತಿ ಕೆರೆ ಯಾವುದು? ಸಹಜವಾಗಿಯೇ ಪ್ರಶ್ನೆ ಮೂಡಿತು.

## ಮಯ್ದುವೊಳಲ ದಿವ್ಯ ತೀರ್ಥ

ಬೆಟ್ಟದ ಹಿಂಬದಿಯಲ್ಲಿ ಹಲವು ಬಂಡೆಗಳು ಮಲಗಿದ್ದವು. ಚಿಕ್ಕಮಗುವಿನ ಉತ್ಸಾಹದಲ್ಲಿ ಒಂದರ ಮೇಲೆ ಹತ್ತಿ ಮತ್ತೊಂದು ಎತ್ತರದ ಬಂಡೆಗೆ ಜಿಗಿದೆ. ಇಲ್ಲಿಂದ ಎದುರು ಬಲಭಾಗಕ್ಕೆ



ದೇಗುಲ ಸಮುಚ್ಚಯದಲ್ಲಿರುವ ಚಂದ್ರಪ್ರಭ ತೀರ್ಥಂಕರ ಬಸದಿ

